# ಕರ್ನಾಟಕ ಸರ್ಕಾರ

ಸಂ.ಆಇ 02 ಟಿಎಆರ್ 2020

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:16.06.2020

## ಸುತ್ತೋಲೆ

**ವಿಷಯ:**ಇಲಾಖಾ ಜಮೆ ಮತ್ತು ವೆಚ್ಚಗಳ ಕುರಿತು ಮಹಾಲೇಖಪಾಲರ ಲೆಕ್ಕಗಳೊಂದಿಗೆ ಲೆಕ್ಕ ಹೊಂದಾಣಿಕೆ ಮಾಡಿಕೊಳ್ಳುವ ಬಗ್ಗೆ.

******

ಕರ್ನಾಟಕ ಬಜೆಟ್ ಕೈ ಪಿಡಿಯ ಪ್ಯಾರಾ 251 ರಲ್ಲಿ ಲೆಕ್ಕ ಹೊಂದಾಣಿಕೆ ಕಾರ್ಯವನ್ನು ಹಣಕಾಸು ವರ್ಷದ ಕೊನೆಯವರೆಗೂ ಮುಂದೂಡದೆ ಲೆಕ್ಕಗಳು ಮುಕ್ತಾಯವಾದ ನಂತರ ಲೆಕ್ಕಗಳಲ್ಲಿನ ತಪ್ಪು ವರ್ಗೀಕರಣಗಳನ್ನು ಸರಿಪಡಿಸಲು ಸಾಧ್ಯವಾಗುವುದಿಲ್ಲವಾದ್ದರಿಂದ, ಹೊಂದಾಣಿಕೆ ಕಾರ್ಯವನ್ನು ನಿಯಮಿತವಾಗಿ ಮಾಡಬೇಕೆಂದು ತಿಳಿಸಲಾಗಿದೆ.

ಲೆಕ್ಕ ಹೊಂದಾಣಿಕೆ ಮಾಡುವುದರಿಂದ ಇಲಾಖೆಗಳಲ್ಲಿನ ಲೆಕ್ಕಪತ್ರಗಳ ಗುಣಮಟ್ಟವನ್ನು ಹೆಚ್ಚಿಸಲು ಹಾಗೂ ಸಂಭವನೀಯ ವಂಚನೆ ಮತ್ತು ಹಣದ ದುರುಪಯೋಗವನ್ನು ತಪ್ಪಿಸಲು ಸಾಧ್ಯವಾಗುತ್ತದೆ. ಸಾಲ ಮತ್ತು ಮುಂಗಡಗಳನ್ನು ಒಳಗೊಂಡಂತೆ ಇಲಾಖಾ ಜಮೆ ಮತ್ತು ವೆಚ್ಚಗಳ ಲೆಕ್ಕ ಹೊಂದಾಣಿಕೆಯನ್ನು ಮಾಡುವುದು ಮುಖ್ಯ ನಿಯಂತ್ರಣಾಧಿಕಾರಿಗಳ/ ನಿಯಂತ್ರಣಾಧಿಕಾರಿಗಳ ಕರ್ತವ್ಯವಾಗಿರುತ್ತದೆ. ಹಾಗೆಯೇ ಇದನ್ನು ಆಂತರಿಕ ಆರ್ಥಿಕ ಸಲಹೆಗಾರರು ಮೇಲ್ವಿಚಾರಣೆ ಮಾಡಬೇಕಾಗಿರುತ್ತದೆ.

ಮಹಾಲೇಖಪಾಲರ ಪತ್ರ ಸಂಖ್ಯೆ:PAG (A&E)/TM/T4/2020-21/9,ದಿನಾಂಕ:28-02-2020 ರಲ್ಲಿ ತಿಳಿಸಿದಂತೆ 423 ಮುಖ್ಯ ನಿಯಂತ್ರಣಾಧಿಕಾರಿಗಳ ಪೈಕಿ 241 ನಿಯಂತ್ರಣಾಧಿಕಾರಿಗಳು ಪೂರ್ಣವಾಗಿ, 104 ನಿಯಂತ್ರಣಾಧಿಕಾರಿಗಳು ಭಾಗಶಃ ಲೆಕ್ಕ ಹೊಂದಾಣಿಕೆ ಮಾಡಿಕೊಂಡಿದ್ದು, 72 ನಿಯಂತ್ರಣಾಧಿಕಾರಿಗಳು ಲೆಕ್ಕ ಹೊಂದಾಣಿಕೆ ಮಾಡಿರುವುದಿಲ್ಲವೆಂಬುದನ್ನು ಸರ್ಕಾರದ ಗಮನಕ್ಕೆ ತಂದಿರುತ್ತಾರೆ.

ಈ ಬಗ್ಗೆ ಆರ್ಥಿಕ ಇಲಾಖೆಯಿಂದ ಪ್ರತಿ ವರ್ಷ ಸುತ್ತೋಲೆ ಹಾಗೂ ಅರೆ ಸರ್ಕಾರಿ ಪತ್ರಗಳ ಮೂಲಕ ಎಲ್ಲಾ ಇಲಾಖೆಗಳಿಗೆ ಸೂಚನೆಗಳನ್ನು ನೀಡಲಾಗಿದ್ದರೂ ಈ ಕುರಿತು ಸಾಕಷ್ಟು ಪ್ರಗತಿ ಕಂಡುಬಂದಿಲ್ಲ. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯು ಇದನ್ನು ಗಂಭೀರವಾಗಿ ಪರಿಗಣಿಸಿದೆ.

**ಆದ್ದರಿಂದ ಸಾರ್ವತ್ರಿಕ ಲೆಕ್ಕಪತ್ರ ಸಮಿತಿಯ ಶಿಫಾರಸ್ಸಿನಂತೆ ತಮ್ಮ ವ್ಯಾಪ್ತಿಯಡಿ ಬರುವ ಮುಖ್ಯ ನಿಯಂತ್ರಣಾಧಿಕಾರಿಗಳಿಗೆ/ ನಿಯಂತ್ರಣಾಧಿಕಾರಿಗಳಿಗೆ ಲೆಕ್ಕ ಹೊಂದಾಣಿಕೆ ಮಾಡುವ ಬಗ್ಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡುವಂತೆ ಕೋರಲಾಗಿದೆ. ಇಲಾಖೆಗಳ ಆಂತರಿಕ ಆರ್ಥಿಕ ಸಲಹೆಗಾರರು ಪ್ರತಿ ತಿಂಗಳು ತಮ್ಮ ವ್ಯಾಪ್ತಿಯ ಇಲಾಖೆಗಳಿಂದ ಲೆಕ್ಕ ಹೊಂದಾಣಿಕೆ ಮಾಡಿದ ಬಗ್ಗೆ ಮಹಾಲೇಖಪಾಲರ ದೃಢೀಕರಣವನ್ನು ಪಡೆದು ಕಡ್ಡಾಯವಾಗಿ ಆರ್ಥಿಕ ಇಲಾಖೆಗೆ ಸಲ್ಲಿಸುವಂತೆ ಸೂಚಿಸಲಾಗಿದೆ. ಆದಾಗ್ಯೂ ಮತ್ತದೇ ನ್ಯೂನ್ಯತೆಗಳು ಮರುಕಳಿಸಿದರೆ ಸಂಬಂಧಪಟ್ಟ ಆಡಳಿತ ಇಲಾಖೆಗಳೇ ಜವಾಬ್ದಾರರಾಗುತ್ತಾರೆಂದು ಈ ಮೂಲಕ ತಿಳಿಸಲಾಗಿದೆ.**

16/6

(ಏಕ್‌ರೂಪ್ ಕೌರ್)
ಸರ್ಕಾರದ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ)
ಆರ್ಥಿಕ ಇಲಾಖೆ

ಇವರಿಗೆ:

1.ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು.
2.ಎಲ್ಲಾ ಇಲಾಖಾ ಮುಖ್ಯಸ್ಥರು/ನಿಯಂತ್ರಣಾಧಿಕಾರಿಗಳು.
3.ಎಲ್ಲಾ ಆಂತರಿಕ ಆರ್ಥಿಕ ಸಲಹೆಗಾರರು.